ನೀನು ಬೀದಿಗುಡಿಸುವ ಕೆಲಸವನ್ನೋ, ಕಾರ್ಖಾನೆಯ ಕೆಲಸಗಾರನಾಗಿಯೋ ದುಡಿಯಲು ಒಪ್ಪುತ್ತೀಯೋ? ನಿನ್ನ ಆಡಂಬರಗಳಿಗೇನು ಕಡಿಮೆಯಿಲ್ಲ!'

'ನೀವು ತರ್ಕಿಸುವ ರೀತಿ... ದೇವರೇ!' ಆ ಯಾಚಕ ಕಟುನಗೆಯೊಂದಿಗೆ ಮಾತಾಡಿದ. 'ನನಗೆ ಕೂಲಿ ಕೆಲಸವಾದರೂ ಎಲ್ಲಿ ಸಿಕ್ಕೀತು? ಈಗ ಅಂಗಡಿಯವನಾಗಲು ಸಾಧ್ಯವಿಲ್ಲ. ಯಾಕೆಂದರೆ, ಅದಕ್ಕೆ ಚಿಕ್ಕವಯಸ್ಸಿನಲ್ಲೇ ತರಬೇತಿ ಪಡೆಯಬೇಕು; ಬೀದಿಗುಡಿಸುವ ಕೆಲಸಕ್ಕೆ ನನ್ನನ್ನು ಯಾರೂ ಕರೆಯುವುದಿಲ್ಲ. ಏಕೆಂದರೆ ಬೈಯಿಸಿಕೊಳ್ಳುವ ವರ್ಗಕ್ಕೆ ಸೇರಿದವನಲ್ಲ. ನನ್ನನ್ನು ಕಾರ್ಖಾನೆಯ ಕೆಲಸಗಾರನಾಗಿ ತೆಗೆದುಕೊಳ್ಳುವುದಕ್ಕೆ ಕೌಶಲಗಳು ಗೊತ್ತಿರಬೇಕು ಮತ್ತು ನನಗೆ ಅದಕ್ಕೆ ಬೇಕಾದ ಯಾವ ಕೌಶಲವೂ ಗೊತ್ತಿಲ್ಲ.'

'ಅಸಂಬದ್ಧ! ಈ ಎಲ್ಲಾ ವಾದ ನೀನು ಸರಿ ಎಂದು ಸಾಧಿಸುವುದಕ್ಕೆ! ಸರಿ, ಹೇಳು, ಸೌದೆ ಒಡೆಯುವ ಕೆಲಸ ಮಾಡುತ್ತೀಯಾ?'

'ನಾನು ಬೇಡವೆನ್ನಲಾರೆ. ಆದರೆ, ಈಗಿನ ದಿನಗಳಲ್ಲಿ ಸೌದೆ ಒಡೆಯುವವನೂ ಹಸಿವೆಯಿಂದಿದ್ದಾನೆ.'

'ಎಲ್ಲಾ ಪರಾವಲಂಬಿಗಳೂ ಹೀಗೆಯೇ ಮಾತನಾಡುವುದು. ಯಾರಾದರೂ ನಿನಗೆ ಕೆಲಸ ಕೊಡುತ್ತೇನೆಂದರೆ ಬೇಡವೆನ್ನುತ್ತೀಯ. ಈಗ, ನಾನು ನಿನಗೆ ಸೌದೆ ಒಡೆಯುವ ಕೆಲಸ ಕೊಟ್ಟರೆ, ಮಾಡುತ್ತೀಯ?'

'ಸರಿ, ನಾನು ಕೆಲಸ ಮಾಡುತ್ತೇನೆ...'

'ಒಳ್ಳೇದು... ಸರಿ... ಬಹಳ ಒಳ್ಳೇದು... ನೋಡೋಣ.'

ಸ್ಕ್ವೋರ್ಟ್ಸೊಫ್ ಕೈಗಳನ್ನು ಉಜ್ಜಿಕೊಳ್ಳುತ್ತಾ, ಒಳಗೊಳಗೇ ಸಂತೋಷಿಸುತ್ತಾ, ಆತುರದಿಂದ ಒಳ ಹೋಗುತ್ತಾ, ಒಳಗಿದ್ದ ಅಡುಗೆಯವಳನ್ನು ಕರೆದ.

'ಇಲ್ಲಿ ಕೇಳು, ಓಲ್ಗಾ... ಈ ಒಳ್ಳೆಯ ಮನುಷ್ಯನನ್ನು ಸೌದೆ ಇಟ್ಟಿರುವಲ್ಲಿಗೆ ಕರೆದುಕೊಂಡು ಹೋಗು ಮತ್ತು ಒಡೆಯಬೇಕಾದ ಕೊರಡನ್ನು ತೋರಿಸು.'

ಆ ನಿರ್ಗತಿಕ ಬೆದರುಬೊಂಬೆ ಭುಜಹಾರಿಸುತ್ತಾ, ಗೊಂದಲಗೊಂಡು, ಏನೋ ಸಂದಿಗ್ಧದಲ್ಲಿ, ಅಡುಗೆಯವಳನ್ನು ಹಿಂಬಾಲಿಸಿದ. ಅವನ ನಡಿಗೆಯಿಂದಲೇ ಗೊತ್ತಾಗುತ್ತಿತ್ತು – ಅವನು ಸೌದೆ ಒಡೆಯಲು ಒಪ್ಪಿದ್ದು ಹಸಿವು ಇಂಗಿಸುವುದಕ್ಕಾಗಿಯೋ ಅಥವಾ ಇದು ಹಣ ಸಂಪಾದಿಸಲು ಒಂದು ದಾರಿ ಎಂದಲ್ಲ; ಒಣ ಜಂಬದಿಂದ ತಾನಾಡಿದ ಮಾತಿಗೆ ಸಿಕ್ಕಿಹಾಕಿಕೊಂಡಿದ್ದಕ್ಕೆ ಎಂದು. ಇದರ ಜೊತೆ, ವೋಡ್ಕಾ ಕುಡಿದು ಅವನ ಆರೋಗ್ಯ ಹಾಳಾಗಿದ್ದುದು, ನಿಶ್ಶಕ್ತನಾಗಿದ್ದುದು ಮತ್ತು ಅವನಿಗೆ ಕೆಲಸದಲ್ಲಿ ಸ್ವಲ್ಪವೂ ಆಸಕ್ತಿ ಇಲ್ಲ ಎನ್ನುವುದು ಎದ್ದು ಕಾಣುತ್ತಿತ್ತು.

ಸ್ಕ್ವೋರ್ಟ್ಸೊಫ್ ಆತುರಾತುರವಾಗಿ ಊಟದ ಕೋಣೆಯ ಕಿಟಕಿಯ ಕಡೆ ಹೋದ. ಅಲ್ಲಿಂದ ಸೌದೆ ಇಡುತ್ತಿದ್ದ ಜಾಗ ಮತ್ತು ಹಿತ್ತಲಲ್ಲಿ ಆಗುತ್ತಿದ್ದ ಎಲ್ಲಾ ಕೆಲಸಗಳು ಸ್ಪಷ್ಟವಾಗಿ ಕಾಣುತ್ತಿತ್ತು. ಅಲ್ಲಿ ನಿಂತು ಓಲ್ಗಾ ಮತ್ತು ಆ ಭಿಕ್ಷುಕ ಇಬ್ಬರೂ ಹಿತ್ತಲ ಬಾಗಿಲಿಂದ ಕೊಳೆಯಾದ ಮಂಜನ್ನು ಹಾದು ಸೌದೆಯಿಟ್ಟಿದ್ದ ಶೆಡ್ಡಿನೊಳಗೆ ಹೋಗುವುದು ಕಂಡಿತು. ಓಲ್ಗಾ ಸಿಡುಕುತ್ತ ಶೆಡ್ಡಿನ ಬೀಗ ತೆಗೆದು, ಮೊಳಕೈಯಿಂದ ಬಾಗಿಲನ್ನು ನೂಕುತ್ತಾ ಸಿಟ್ಟಿನಿಂದ ಬಾಗಿಲನ್ನು ದೂಕಿದಳು.

'ಇವಳ ಕಾಫಿ ಕುಡಿಯುವ ಸಮಯಕ್ಕೆ ನಮ್ಮಿಂದ ಅಡ್ಡಿಯಾಯಿತೇನೋ', ಎಂದುಕೊಂಡ ಸ್ಕ್ವೋರ್ಟ್ಸೊಫ್. 'ಎಂಥ ಸಿಡುಕಿನ ಪ್ರಾಣಿ!'

ನಂತರ ಆ ಹುಸಿ ವಿದ್ಯಾರ್ಥಿ– ಹುಸಿ ಶಿಕ್ಷಕ– ಒಂದು ಮರದ ತುಂಡಿನ ಮೇಲೆ ಕೂತು, ಏನನ್ನೋ ಯೋಚಿಸುತ್ತಾ ತನ್ನ ಕೆಂಪಾದ ಕೆನ್ನೆಗಳನ್ನು ಕೈಗಳ ಮೇಲೆ ಊರಿದ್ದ. ಆ ಹೆಂಗಸು ಕೊಡಲಿಯನ್ನು ಅವನ ಕಾಲಿನತ್ತ ಎಸೆದು, ಸಿಟ್ಟಿನಿಂದ ಉಗುಳುತ್ತಾ, ಅವಳ ತುಟಿಗಳ ಭಾವವನ್ನು ವಿಮರ್ಶಿಸಿದರೆ, ಅವಳು ಜೋರಾಗಿ ಬೈಯುತ್ತಿದ್ದಳು ಎನ್ನಬಹುದು. ಆ ನಿರ್ಗತಿಕ ಇನ್ನೂ ವಿಚಲಿತನಾಗಿದ್ದುಕೊಂಡೇ, ಮರದ ಕೊರಡನ್ನು ತನ್ನತ್ತ ಎಳೆದುಕೊಂಡು, ತನ್ನ ಕಾಲಿನ ಮಧ್ಯ ಇಟ್ಟುಕೊಂಡು, ನಡುಗುವ ಕೈಗಳಿಂದ ಕೊಡಲಿಯಿಂದ ಮೆಲ್ಲಗೆ ಕುಟ್ಟಿದ. ಆ ಕೊರಡು ಅಲ್ಲಾಡಿ, ಕೆಳಗೆ ಉರುಳಿ ಬಿತ್ತು. ಆ ನಿರ್ಗತಿಕ ಮತ್ತೆ ಅದನ್ನು ತನ್ನತ್ತ ಸೆಳೆದುಕೊಂಡು, ಬಿಸಿಯುಸಿರಿನಿಂದ ಕೈ ಉಜ್ಜಿಕೊಂಡು ಕೊಡಲಿಯಿಂದ ಜೋರಾಗಿ ಏಟು ಹಾಕಿದರೆ ಎಲ್ಲಿ ತನ್ನ ಮೇಲ್ಜೋಡಿಗೋ ಅಥವಾ ತನ್ನ ಕಾಲ್ಬೆರಳಿಗೋ ಏಟಾಗುತ್ತದೆ ಎನ್ನುವಂತೆ ಆ ಕೊರಡಿಗೆ ಮೆತ್ತಗೆ ಏಟು ಹಾಕಿದ. ಆ ಕೊರಡು ಮತ್ತೆ ಉರುಳಿ ಬಿತ್ತು.

ಇಷ್ಟು ಹೊತ್ತಿಗೆ ಸ್ಕ್ವೋರ್ಟ್ಸೊಫ್‌ನ ಸಿಟ್ಟು ಮಾಯವಾಗಿತ್ತು ಮತ್ತು ಈಗ ಅವನಿಗೆ ಈ ಅನಾರೋಗ್ಯದ ಕುಡುಕ, ರೋಗಿಗೆ ಈ ಚಳಿಯಲ್ಲಿ ದೈಹಿಕ ಶ್ರಮದ ಕೆಲಸ ಕೊಟ್ಟಿದ್ದಕ್ಕೆ ತನ್ನ ಬಗ್ಗೆಯೇ ಸ್ವಲ್ಪ ಬೇಜಾರಾಯಿತು.

'ಹೋಗಲಿ ಬಿಡು... ನಾನು ಇದನ್ನು ಅವನ ಒಳ್ಳೆಯದಕ್ಕಾಗೇ ಮಾಡಿದೆ' ಎಂದುಕೊಂಡು, ಊಟದ ಕೋಣೆಯನ್ನು ಹಾದು ವಾಪಸ್ ತನ್ನ ಓದಿನ ಕೋಣೆಗೆ ಹೊರಟ.

ಒಂದು ಗಂಟೆಯ ನಂತರ ಓಲ್ಗಾ ಒಳಗೆ ಬಂದು, 'ಅವನು ಸೌದೆಯನ್ನು ಒಡೆದು, ಅದನ್ನು ಜೋಡಿಸಿಟ್ಟಾಯಿತು' ಎಂದಳು.

'ಒಳ್ಳೇದು! ಅವನಿಗೆ ಐವತ್ತು ಕೊಪೆಕ್ ಕೊಡು' ಎಂದ ಸ್ಕ್ವೋರ್ಟ್ಸೊಫ್. 'ಬೇಕೆಂದರೆ ಅವನು ಪ್ರತಿ ತಿಂಗಳ ಮೊದಲನೇ ದಿನ ಬಂದು ಸೌದೆ ಒಡೆದುಕೊಟ್ಟು ಹೋಗಲಿ. ಮತ್ತೆ ಅವನು ಬಂದರೆ ನಾವು ಏನಾದರೂ ಕೆಲಸ ಕೊಡಬಹುದು.'

ಮುಂದಿನ ತಿಂಗಳ ಮೊದಲ ದಿನ ಮತ್ತೆ ಆ ನಿರ್ಗತಿಕ ಬಂದು ಐವತ್ತು ಕೊಪೆಕ್ ಗಳಿಸಿಕೊಂಡ. ಈ ಸಲ ಬಂದಾಗ ಅವನಿಗೆ ಸರಿಯಾಗಿ ತನ್ನ ಕಾಲ ಮೇಲೆ ನಿಲ್ಲಲೂ ಆಗುತ್ತಿರಲಿಲ್ಲ. ಆದರೆ, ಅಂದಿನಿಂದ ಅವನು ಪದೇ ಪದೇ ಸ್ಕ್ವೋರ್ಟ್ಸೊಫ್‌ನ ಹಿತ್ತಲಲ್ಲಿ ಕಾಣಿಸಿಕೊಳ್ಳುತ್ತಿದ್ದ. ಮತ್ತೆ, ಅವನು ಬಂದಾಗಲೆಲ್ಲಾ ಏನಾದರೂ ಕೆಲಸವಿರುತಿತ್ತು. ಒಮ್ಮೆ ಮಂಜನ್ನು ತೆಗೆದು ದಾರಿ ಸರಿಮಾಡಿದರೆ, ಇನ್ನೊಮ್ಮೆ ಕಡಿದ ಸೌದೆಯನ್ನು ಜೋಡಿಸಿಡುತ್ತಿದ್ದ. ಮತ್ತೊಮ್ಮೆ, ಹಾಸಿಗೆ ಮತ್ತು ಕಂಬಳಿಗಳ ದೂಳು ತೆಗೆದು, ಹದ ಮಾಡಿಡುತ್ತಿದ್ದ. ಪ್ರತಿಸಲ, ಇಪ್ಪತ್ತರಿಂದ ನಲವತ್ತು ಕೊಪೆಕ್ ಸಂಪಾದಿಸುತ್ತಿದ್ದ; ಒಮ್ಮೆ, ಹಳೆಯ ಪ್ಯಾಂಟು–ಶರ್ಟು ಸಿಕ್ಕಿತ್ತು.

ಸ್ಕ್ವೋರ್ಟ್ಸೊಫ್ ಬೇರೆ ಮನೆ ಬದಲಾಯಿಸಿದಾಗ, ಅವನನ್ನು ಮನೆಯ ಸಾಮಾನು ಸಾಗಿಸುವ ಕೆಲಸಕ್ಕೆ ಕರೆದಿದ್ದ – ಸಾಮಾನು ಕಟ್ಟಲು ಮತ್ತು ಪೀಠೋಪಕರಣಗಳನ್ನು ಸಾಗಿಸಲು. ಇಂದು ಆ ಭಿಕ್ಷುಕ ಕುಡಿಯದೆ, ಬೇಜಾರಿಂದ, ಮಾತನಾಡದೆ ಸುಮ್ಮನಿದ್ದ. ಪೀಠೋಪಕರಣಗಳನ್ನು ಮುಟ್ಟಲೂ ಇಲ್ಲ. ಗಾಡಿಯ ಹಿಂದೆ ತಲೆ ಬಗ್ಗಿಸಿ, ಕೆಲಸ ಮಾಡುವವನಂತೆಯೂ ನಟಿಸದೆ ನಡೆಯುತ್ತಿದ್ದ. ಚಳಿಯಲ್ಲಿ ನಡುಗುತ್ತಿದ್ದ; ಮತ್ತೆ ಗಾಡಿಯವರು ಅವನನ್ನು ಅವನ ಸೋಮಾರಿತನಕ್ಕೆ, ಶಕ್ತಿಹೀನತೆಗೆ ಮತ್ತು ಹರಿದು ಹೋಗಿದ್ದ, ಶ್ರೀಮಂತರು ಧರಿಸಿ, ಬೇಡವೆಂದು ಕೊಟ್ಟಿದ್ದ ಕೋಟು ಹಾಕಿದ್ದಕ್ಕೆ, ಜೋರಾಗಿ ಜರೆದು ನಕ್ಕಾಗ ನಾಚಿ ತಲೆ ಬಗ್ಗಿಸಿ ನಡೆಯುತ್ತಿದ್ದ. ಸಾಮಾನು ಸಾಗಿಸಿಯಾದ ಮೇಲೆ ಸ್ಕ್ವೋರ್ಟ್ಸೊಫ್ ಅವನಿಗೆ ಹೇಳಿ ಕಳುಹಿಸಿದ.

'ಸರಿ, ನನ್ನ ಮಾತುಗಳು ನಿನ್ನ ಮೇಲೆ ಪ್ರಭಾವ ಬೀರಿದೆ ಎಂದು ಕಾಣುತ್ತದೆ' ಎನ್ನುತ್ತಾ, ಸ್ಕ್ವೋರ್ಟ್ಸೊಫ್ ಒಂದು ರೂಬಲ್ ಅವನಿಗೆ ಕೊಟ್ಟ. 'ಇದು ನಿನ್ನ ಪರಿಶ್ರಮಕ್ಕೆ. ಈಗ ನೀನು ಕುಡಿಯುತ್ತಿಲ್ಲ ಮತ್ತು ಕೆಲಸ ಮಾಡಲು ತಯಾರಿದ್ದೀಯ ಎಂದು ಕಾಣುತ್ತಿದೆ. ನಿನ್ನ ಹೆಸರೇನು?'

'ಲುಷ್ಕೋಫ್'

'ಇಲ್ಲಿ ಕೇಳು ಲುಷ್ಕೋಫ್. ಇನ್ನು ನಾನು ನಿನಗೆ ಬೇರೆಯ ಒಳ್ಳೆಯ ಕೆಲಸ ಕೊಡಿಸಬಹುದು. ನಿನಗೆ ಬರೆಯಲು ಬರುತ್ತದೆಯೇ?'

'ಹೌದು, ಬರುತ್ತದೆ.'

'ಹಾಗಿದ್ದರೆ, ಈ ಕಾಗದವನ್ನ ನನ್ನ ಒಬ್ಬ ಸಹೋದ್ಯೋಗಿಯ ಬಳಿಗೆ ಒಯ್ಯಿ. ನಿನಗೆ ಕಾಪಿ ಮಾಡುವ ಕೆಲಸ ಕೊಡುತ್ತಾನೆ. ಚೆನ್ನಾಗಿ ಕೆಲಸ ಮಾಡು, ಕುಡಿಯಬೇಡ. ಹಾಗೇ ನಾನು ಮಾಡಿದ ಸಹಾಯವನ್ನು ಮರೆಯಬೇಡ. ಹೊರಡು, ಒಳೆಯದಾಗಲಿ.'

ಒಬ್ಬ ಮನುಷ್ಯನಿಗೆ ಸರಿದಾರಿ ತೋರಿದ್ದಕ್ಕೆ ಸಂತೋಷಪಟ್ಟ ಸ್ಕ್ವೋರ್ಟ್ಸೊಫ್, ಒಳ್ಳೆಯತನದಿಂದ ಲುಷ್ಕೋಫನ ಬೆನ್ನು ತಟ್ಟಿ ಕಳುಹಿಸಿಕೊಟ್ಟ. ಲುಷ್ಕೋಫ್ ಕಾಗದ ತೆಗೆದುಕೊಂಡ. ಮತ್ತೆಂದೂ ಅವನು ಅಲ್ಲಿಗೆ ಕೆಲಸಕ್ಕೆ ಬರಲಿಲ್ಲ.

ಹೀಗೇ ಎರಡು ವರ್ಷ ಕಳೆಯಿತು. ನಂತರದ ಒಂದು ಸಂಜೆ ಸ್ಕ್ವೋರ್ಟ್ಸೊಫ್ ನಾಟಕ ನೋಡಲು ರಂಗಮಂದಿರಕ್ಕೆ ಟಿಕೆಟ್ ಪಡೆಯಲು ನಿಂತಿದ್ದಾಗ, ಅಲ್ಲಿ ಒಬ್ಬ ಸಣ್ಣನೆಯ ವ್ಯಕ್ತಿ, ಉದ್ದನೆಯ ಉಣ್ಣೆಯ ಕೋಟನ್ನು ಮತ್ತು ಅಗ್ಗದ ಸೀಲ್ ಚರ್ಮದ ಟೊಪ್ಪಿಗೆಯನ್ನು ಹಾಕಿ ಅವನ ಪಕ್ಕದಲ್ಲೇ ನಿಂತಿದ್ದ. ಆ ಸಣ್ಣಗಿನ ಮನುಷ್ಯ ಮೆಲುಧ್ವನಿಯಲ್ಲಿ ಮಾತಾಡುತ್ತಾ ತಾಮ್ರದ ನಾಣ್ಯ ಕೊಟ್ಟು ಮಹಡಿಯಲ್ಲಿ ಒಂದು ಜಾಗ ಖರೀದಿಸಿದ.

'ಅರೆ! ಲುಷ್ಕೋಫ್ ನೀನು?' ಎಂದು ಜೋರಾಗಿ ಕೂಗಿದ. ಸ್ಕ್ವೋರ್ಟ್ಸೊಫ್ ಹಿಂದಿನ ಸೌದೆ ಒಡೆಯುವವನನ್ನು ಗುರುತಿಸಿ, 'ಹೇಗಿದ್ದೀಯಾ